


### ಸಮಸ್ಯೆಗಳ ಅನಾವರಣ

'ಚಂದನವನದಲ್ಲಿ ಹಣವಿಲ್ಲ', ರಘುನಾಥ ಚ.ಹ. ಅವರ ಮುಖಪುಟ ಲೇಖನ (ಡಿ. 8) ಚಂದನವನದ ಸಮಸ್ಯೆಗಳನ್ನು ಅನಾವರಣಗೊಳಿಸಿದೆ. ಕೋಟಿ ಕೋಟಿ ಹಣ ಹೂಡಿ ಸಿನಿಮಾ ಮಾಧ್ಯಮದ ಮೂಲಕ ಕಪ್ಪು ಹಣವನ್ನು ಬಿಳಿ ಮಾಡುವ ಉದ್ದೇಶದಿಂದ ಬರುತ್ತಿದ್ದ ಕನ್ನಡ ಚಿತ್ರಗಳ ಹಾವಳಿ ತಪ್ಪಿದಂತಾಗುತ್ತದೆ. ಹೊಸ–ಹಳೇ ತಲೆಮಾರಿನ ನಿರ್ದೇಶಕರ ಕಡಿಮೆ ಬಜೆಟ್‌ನ ಸೃಜನಶೀಲ ಚಿತ್ರ ಬರುವಂತಾಗಲಿ.

—ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಬಿ.ಎಂ.ಶಿವಲಿಂಗೇಗೌಡ ಬೇವಿನಹಳ್ಳಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಪಿ.ಗೋವಿಂದರಾಜ್ ಶಿವಮೊಗ್ಗ, ಸುಂದರ್ ಬೆಂಗಳೂರು

### ಕೆಲಸಕ್ಕೆ ಬಾರದ ನೋಟು

ಮುಂದಿನ ವರ್ಷದ ಹೊಸ ಸಿನಿಮಾ 'ನಮಗೇ ನಿಮ್ಮ ಓಟು'. ಅದಕ್ಕೀಗ ಅಡ್ಡ ಬಂದಿದೆ ಕೆಲಸಕ್ಕೆ ಬಾರದ ಕಪ್ಪು ನೋಟು!

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

### ಎಚ್ಚರಿಕೆ ನೀಡಿದೆ

'ನಿಮ್ಮೊಡನೆ'ಯಲ್ಲಿ 'ಈ ರೋಗದ ಬಗ್ಗೆ ಎಚ್ಚರವಿರಲಿ' (ಬಿ.ಎಂ. ಹನೀಫ್) ಬರಹ ಪಾಲಕ–ಪೋಷಕರಿಗೆ ಮುಂಜಾಗ್ರತೆಯ ಎಚ್ಚರಿಕೆಗಳನ್ನು ನೀಡಿದೆ. ಸಂಪರ್ಕ ಸಾಧನಗಳು ಮನುಷ್ಯನ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಆದರೆ ಅಂತರ್ಜಾಲದ ಅತಿಬಳಕೆ ಮನುಷ್ಯನನ್ನು ಹಾಳು ಮಾಡುತ್ತದೆ ಎಂಬುದನ್ನು ಉದಾಹರಣೆಗಳ ಮೂಲಕ ಲೇಖಕರು ವಿವರಿಸಿದ್ದಾರೆ.

—ಗಾಣಧಾಳು ರಾಮಣ್ಣ

### ಸಂದರ್ಭೋಚಿತ

ವಿಚಾರ ಲಹರಿ 'ಕಪ್ಪು ಹಣದ ವ್ಯಾಧಿ' ಸಂದರ್ಭೋಚಿತ. ಮೂಚಿ ಅವರು ನೋಟ್ ಬ್ಯಾನ್‌ನಿಂದಾಗಿರುವ ಸಮಸ್ಯೆಗಳನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಆದರೆ ಈ ಸಮಸ್ಯೆಗಳು ತಾತ್ಕಾಲಿಕ ಎಂಬುದನ್ನು ಅವರು ಬರೆಯಬೇಕಿತ್ತು.

—ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

### ಏಕಮುಖವಾಗಿದೆ

ವಿಚಾರ ಲಹರಿಯಲ್ಲಿ 'ಕಪ್ಪು ಹಣದ ವ್ಯಾಧಿ' ಬರಹ ಸಂಪೂರ್ಣ ಏಕಮುಖವಾಗಿದೆ. ಬ್ಯಾಂಕ್‌ನಲ್ಲಿ ಕ್ಯೂ ನಿಂತದ್ದೇ ದೊಡ್ಡ ವಿಷಯ ಮಾಡುವುದು ಸರಿಯಲ್ಲ. ಕಪ್ಪು ಹಣದ ವಿರುದ್ಧ ಮೋದಿಯವರದು ದಿಟ್ಟ ಹೆಜ್ಜೆ.

—ಉದ್ಯಾವರ ಮನೋಹರ ಎಚ್.

### ಹಾಸ್ಯ ಬರಹ

'ಎಕ್ಸ್‌ಚೇಂಜ್‌ಗೆ ಪರಗಂಡ' (ತುರುವೇಕೆರೆ ಪ್ರಸಾದ್) ಹಾಸ್ಯ ಬರಹ ಚೆನ್ನಾಗಿದೆ.

—ನಾರಾಯಣಯಾಜಿ ಶಿರಾಲಿ

### ಗುಲ್ಕಂದದಿಂದ ಲಾಭ

'ಆರೋಗ್ಯಕ್ಕೆ ಗುಲ್ಕಂದ' (ಡಾ.ಬ್ರಹ್ಮಾನಂದ ನಾಯಕ) ಲೇಖನ ಉಪಯುಕ್ತ ಮಾಹಿತಿ ನೀಡಿದೆ. ಗುಲ್ಕಂದ ಬೀ ಪಾನ್‌ವಾಲ ಹಾಕಿಕೊಟ್ಟದ್ದು ತಿಂದು ಗೊತ್ತು. ಆದರೆ ಇದರ ಸೇವನೆಯಿಂದ ಇಷ್ಟೊಂದು ಲಾಭಗಳು, ಆರೋಗ್ಯಕ್ಕೆ ಪೂರಕ ಗುಣಗಳು ಇವೆ ಎಂಬುದು ಗೊತ್ತಿರಲಿಲ್ಲ. ಲೇಖಕರು ಗುಲ್ಕಂದದ ಬಗ್ಗೆ ಸವಿಸ್ತಾರ ಮಾಹಿತಿ ನೀಡಿದ್ದಾರೆ.

—ಕೃಷ್ಣ ಜೋಶಿ ಧಾರವಾಡ

### ಅಜರಾಮರ

'ಈ ಶತಮಾನದ ಸ್ವರಾವಧಾನಿ' (ಹಂಸಲೇಖ) ಬರಹ ಈ ನಾದಚೇತನಕ್ಕೆ ಅರ್ಪಿಸಿದ ಅಕ್ಷರಾಂಜಲಿ ಎನ್ನಬಹುದು. ಬಾಲಮುರಳಿ ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಮಧುರಾತಿಮಧುರ ಹಾಡುಗಳು ಅಜರಾಮರ.

—ಬಿ.ಎಸ್. ರಮೇಶ್ ಬೆಳ್ಳಾವೆ, ಎಚ್.ಆನಂದಕುಮಾರ್ ಚಿತ್ರದುರ್ಗ, ಪಿ.ಎ. ಸುಧೀಂದ್ರ ಬೆಂಗಳೂರು

### ಕೀರ್ತನೆ ಆಗಾಗ ಕೇಳಬೇಕೆನಿಸುತ್ತದೆ

ಬಾಲಮುರಳಿ ಅವರು ಚಾಮರಾಜಪೇಟೆ ಶ್ರೀರಾಮಸೇವಾ ಮಂಡಳಿಯಲ್ಲಿ ಕೆಲ ವರ್ಷಗಳ ಹಿಂದೆ ಸನ್ಮಾನಕ್ಕೆ ಒಳಗಾಗಿದ್ದರು. ಆ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸಿದಾಗ ಹಸನ್ಮುಖರಾಗಿ ಹಸ್ತಲಾಘವ ಮಾಡಿದ್ದರು. ಬಾಲಮುರಳಿ ಅವರು ಹಾಡಿದ ತ್ಯಾಗರಾಜರ ಅಭೇರಿ ರಾಗದ 'ನಗುಮೋಮು', ರಾಗ ಸುಧಾರಸ ಮುಂತಾದ ಕೀರ್ತನೆಗಳನ್ನು ಆಗಾಗ ಕೇಳಬೇಕೆನಿಸುತ್ತದೆ.

—ಆರ್.ಎಸ್. ಲಕ್ಷ್ಮೀಕಾಂತ್ ಬೆಂಗಳೂರು, ರವೀಂದ್ರನಾಥ ಶಿ. ಯಡಹಳ್ಳಿ

### ಮೇರು ವ್ಯಕ್ತಿತ್ವ

ಮಾತು, ಊಟ, ಸಂಗೀತದಲ್ಲಿ ಮಡಿವಂತಿಕೆ ಬೇಡ ಎನ್ನುತ್ತಿದ್ದ ಬಾಲಮುರಳಿ ಅವರದು ಮೇರು ವ್ಯಕ್ತಿತ್ವ.

—ಕೆ. ಜೋಶಿ ಧಾರವಾಡ



ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ


◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ